119

# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ-7871/2015/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:13.6.2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಶ್ರೀ ಟಿ. ಶಶಿಕುಮಾರ ತಂದೆ ತಿಪ್ಪೇಸ್ವಾಮಿ, ವಾಸ: ಗೌರಸಮುದ್ರ ಅಂಚೆ, ಚಳ್ಳಕೆರೆ ತಾಲ್ಲೂಕು. ಚಿತ್ರದುರ್ಗ ಜಿಲ್ಲೆ ಅವರು ಸಲ್ಲಿಸಿದ ದೂರಿನ ಕುರಿತು.

****

ಈ ದೂರನ್ನು ಶ್ರೀ ಟಿ. ಶಶಿಕುಮಾರ ತಂದೆ ತಿಪ್ಪೇಸ್ವಾಮಿ, ವಾಸ: ಗೌರಸಮುದ್ರ ಅಂಚೆ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ ಕೊರಳಯ್ಯ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗೌರಸಮುದ್ರ ಗ್ರಾಮ ಪಂಚಾಯತ್, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ (2) ಶ್ರೀ ಪ್ರಕಾಶ, ಕಾರ್ಯನಿರ್ವಾಹಕ ಅಧಿಕಾರಿ, ಚಳ್ಳಕೆರೆ ತಾಲ್ಲೂಕು ಪಂಚಾಯತ್, ಚಿತ್ರದುರ್ಗ ಜಿಲ್ಲೆ ಮತ್ತು (3) ಶ್ರೀ ಎನ್.ಜಿ. ಮಲ್ಲಿಕಾರ್ಜು, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗೌರಸಮುದ್ರ ಗ್ರಾಮ ಪಂಚಾಯತ್, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.9ರಡಿಯಲ್ಲಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. ದೂರಿನ ಸಂಕ್ಷಿಪ್ತ ವಿವರ: ಗೌರಸಮುದ್ರ ಗ್ರಾಮದ ಕೆರೆ ಹೂಳು ಎತ್ತುವ ಮತ್ತು ರಸ್ತೆಯ ಅಭಿವೃದ್ಧಿ ಕಾಮಗಾರಿಗಳನ್ನು ನರೇಗಾ ಯೋಜನೆಯ ಅಡಿಯಲ್ಲಿ ತೆಗೆದುಕೊಳ್ಳಲಾಗಿದ್ದು, ಕೂಲಿಕಾರರಿಂದ ಕೆಲಸ ಮಾಡಿಸಲಾಗಿದೆ. ಆದರೆ, ಯಾವುದೇ ಕೂಲಿಕಾರರ ಖಾತೆಗೆ ಹಣ ಸಂದಾಯವಾಗಿಲ್ಲ. ಸಾಕಷ್ಟು ಸಲ ವಿನಂತಿಕೊಂಡರೂ ಸಹ ಎದರುದಾರರು ಹಣ ಪಾವತಿಸಿಲ್ಲ. ಆದ್ದರಿಂದ, ಕ್ರಮ ತೆಗೆದುಕೊಳ್ಳಲು ಕೋರಿದ್ದಾರೆ. ಗೌರವಾನ್ವಿತ ಲೋಕಾಯುಕ್ತರು ಎದರುದಾರರಿಗೆ ನೋಟಿಸ್ ಕೊಟ್ಟು ಅವರಿಂದ ಆಕ್ಷೇಪಣೆಯನ್ನು ಕೇಳುವಂತೆ ಆದೇಶಿಸಿದ್ದಾರೆ.

3. 2ನೇ ಎದರುದಾರರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ 2010-11ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳ ಸಂಬಂಧ ಹಿಂದಿನ ಪಿ.ಡಿ.ಓ. ಶ್ರೀ ಎನ್.ಜಿ. ಮಲ್ಲಿಕಾರ್ಜುನ ಇವರ ಮೇಲೆ ತಳಕು ಪೊಲೀಸ್ ಠಾಣೆಯಲ್ಲಿ ಸಿ.ಸಿ.ನಂ.99/2013 ರಂತೆ ಕ್ರಿಮಿನಲ್ ಮೊಕದ್ದಮೆ ಹಾಕಲಾಗಿದೆ. ಮೊಳಕಾಲಮೂರು ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದೆ ಅಂತ ವರದಿ ಸಲ್ಲಿಸಿದ್ದಾರೆ. 1ನೇ ಎದರುದಾರರು ಯಾವುದೇ ತಕರಾರುಗಳನ್ನು ಸಲ್ಲಿಸಿಲ್ಲ.

4. 2ನೇ ಎದರುದಾರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ಕ್ರಿಮಿನಲ್ ಮೊಕದ್ದಮೆ ನಡೆಯುತ್ತಿರುವ ಪ್ರಕರಣವೇ ಬೇರೆ. ತಾನು ಕೇಳುತ್ತಿರುವ ಪ್ರಕರಣವೇ ಬೇರೆ. ಎದರುದಾರರು ನರೇಗಾ ಯೋಜನೆಯಲ್ಲಿನ ಹಣವನ್ನು ತಾವೇ ನೇರವಾಗಿ ತೆಗೆದುಕೊಂಡಿದ್ದಾರೆ. ಆದ್ದರಿಂದ ಕ್ರಮ ತೆಗೆದುಕೊಳ್ಳಲು ಕೋರಿದ್ದಾರೆ.

5. ದಿನಾಂಕ: 12-7-2016 ರಂದು ಈ ಪ್ರಕರಣವನ್ನು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ಇವರಿಗೆ ತನಿಖೆಗಾಗಿ ವಹಿಸಲಾಗಿದೆ. ಅದರಂತೆ ಪೊಲೀಸ್ ಅಧೀಕ್ಷಕರು ತಮ್ಮ ವರದಿಯಲ್ಲಿ ಗೌರಸಮುದ್ರ ಗ್ರಾಮ ಪಂಚಾಯತಿಯ ಪಿ.ಡಿ.ಓಗಳಾದ ಶ್ರೀ ಎನ್.ಜಿ. ಮಲ್ಲಿಕಾರ್ಜುನ ಮತ್ತು ಶ್ರೀ ಕೊರಲಯ್ಯ ಇವರು ಕೂಲಿಕಾರರಿಗೆ ಸಂಬಂಧಿಸಿದ ಹಣವನ್ನು ಅವರಿಗೆ ಪಾವತಿ ಮಾಡಿಲ್ಲ. ಗೌರಸಮುದ್ರ ಗ್ರಾಮದ ಕರೆಯ ಹೂಳು ಎತ್ತುವ ಕಾಮಗಾರಿ ಮತ್ತು ರಸ್ತೆ ಅಭಿವೃದ್ಧಿಯ ಕೆಲಸಗಳನ್ನು ಅನುಕ್ರಮವಾಗಿ 116 ಮತ್ತು 73 ಜನ ಕೂಲಿಕಾರರಿಂದ ಮಾಡಿಸಿದ್ದಾರೆ. ಆದರೆ ರೂ.1,59,500/- ಗಳನ್ನು 1ನೇ ಕಾಮಗಾರಿಗೆ ಮತ್ತು ರೂ.99,125/- ಗಳನ್ನು ಕೂಲಿಕಾರರಿಗೆ ಸಂದಾಯ ಮಾಡಿಲ್ಲ. ಈ ಬಗ್ಗೆ ಯಾವುದೇ ರಜಿಸ್ಟರ್ ಇಟ್ಟಿಲ್ಲ ಮತ್ತು ಯಾವುದೇ ಕಡತವನ್ನು ಸಹ ಇಟ್ಟಿಲ್ಲ. ಈ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಯಾದ ಶ್ರೀ ಎಂ.ಆರ್. ಪ್ರಕಾಶ ರವರು ಸುಳ್ಳು ವರದಿಯನ್ನು ಸಲ್ಲಿಸಿದ್ದಾರೆ ಹಾಗೂ ಆಪಾದನೆಗಳು ಸಾಬೀತಾಗಿವೆ ಅಂತ ವರದಿ ಕೊಟ್ಟಿದ್ದಾರೆ.

6. ಸದರಿ ಶ್ರೀ ಎನ್.ಜಿ. ಮಲ್ಲಿಕಾರ್ಜುನ ಇವರನ್ನು 3ನೇ ಎದರುದಾರರನ್ನಾಗಿ ಸೇರಿಸಿಕೊಂಡು ಅವರಿಂದ ತನಿಖಾ ವರದಿಯ ಮೇಲೆ ಆಕ್ಷೇಪಣೆಗಳನ್ನು ಕೇಳಲಾಗಿದೆ.

117

7. 3ನೇ ಎದರುದಾರರು ಕೂಲಿಕಾರ್ಮಿಕರಿಗೆ ಹಣ ಬಿಡುಗಡೆ ಮಾಡುವ ವಿಚಾರದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಚಳ್ಳಕೆರೆ ಇವರಿಗೆ ಅರ್ಜಿಯನ್ನು ಸಲ್ಲಿಸಿದ್ದೇನೆ, ಆದರೆ ಹಣವನ್ನು ಹಣವನ್ನು ಬಿಡುಗಡೆ ಮಾಡಿರುವುದಿಲ್ಲ. ತಾನು ಪ್ರತ್ಯೇಕವಾದ ಕಡತ ನಿರ್ವಹಣೆ ಮಾಡಿದ್ದೇನೆ. ಎಷ್ಟೇ ಮನವಿಯನ್ನು ಸಲ್ಲಿಸಿದ್ದರೂ ಸಹ ಹಣವನ್ನು ಬಿಡುಗಡೆಯಾಗಿಲ್ಲ. ಚಕ್ ಮೂಲಕ ಹಣ ಪಾವತಿ ಮಾಡುವ ಪದ್ಧತಿ ಬದಲಾಗಿ "ಇ.ಎಫ್.ಎಂ.ಎಸ್." ವ್ಯವಸ್ಥೆ ಬಂದಿದ್ದರಿಂದ ಅನುದಾನ ಬಿಡುಗಡೆ ಮಾಡಲು ಸಾಧ್ಯವಾಗಿಲ್ಲ. ಆದ್ದರಿಂದ, ಈ ದೂರಿನಿಂದ ತಮ್ಮನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

8. 2ನೇ ಎದರುದಾರರು ಪಿ.ಡಿ.ಓ. ರವರ ವರದಿಯ ಮೇಲೆ ತಾನು ಮಾಹಿತಿ ಕೊಟ್ಟಿದ್ದೇನೆ. ನಿರ್ದಿಷ್ಟವಾಗಿ ಪರಿಶೀಲನೆ ಮಾಡಲು ಸಾಧ್ಯವಾಗಲಿಲ್ಲ. ಆದ್ದರಿಂದ ಕ್ಷಮೆ ಕೋರುತ್ತೇನೆ. ನಾನು ಪ್ರಸ್ತುತ ಅಮಾನತ್ತುಗೊಂಡಿರುತ್ತೇನೆ ಹಾಗೂ ದಾವೆ ದಾಖಲಾಗಿರುವುದರಿಂದ ಸಂಪೂರ್ಣ ಕಡತಗಳು ನ್ಯಾಯಾಲಯದ ವಶದಲ್ಲಿರುತ್ತವೆ ಅಂತ ತಿಳಿಸಿದ್ದಾರೆ.

9. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. 2ನೇ ಎದರುದಾರರು ಜವಾಬ್ದಾರಿಯುತ ಸರ್ಕಾರಿ ಅಧಿಕಾರಿಯಾಗಿದ್ದರೂ ಸಹ ಯಾವುದೇ ಪರಿಶೀಲನೆ ಮಾಡದೇ ಪಿ.ಡಿ.ಓ ರವರ ವರದಿಯಂತೆ ಕೂಲಿಕಾರರಿಗೆ ಹಣ ಪಾವತಿ ಮಾಡಲಾಗಿದೆ ಅಂತ ಸುಳ್ಳು ವರದಿ ಸಲ್ಲಿಸಿದ್ದಾರೆ. ನೇರವಾಗಿ ಈ ಬಗ್ಗೆ ಕ್ಷಮೆ ಕೋರುತ್ತಾರೆ. ಸರ್ಕಾರಿ ಯೋಜನೆಗಳ ಅನುಷ್ಠಾನದಲ್ಲಿ ತೀವ್ರ ನಿರ್ಲಕ್ಷತನವನ್ನು ತೋರಿಸಿದ್ದಾರೆ. 1 ಮತ್ತು 3ನೇ ಎದರುದಾರರು ಸದರಿ 2 ಕಾಮಗಾರಿಗಳಲ್ಲಿ ಕೆಲಸ ಮಾಡಿರುವ ಕೂಲಿಕಾರರಿಗೆ ಹಣ ಪಾವತಿ ಮಾಡಿಸದೇ ಕರ್ತವ್ಯಲೋಪ ಎಸೆಗಿದ್ದಾರೆ. ಕಡತಗಳನ್ನು ಕ್ರಿಮಿನಲ್ ಮೊಕದ್ದಮೆಯಲ್ಲಿ ಸಲ್ಲಿಸಲಾಗಿದೆ ಎನ್ನುವುದು ಕೂಲಿಕಾರರಿಗೆ ಹಣ ಪಾವತಿ ಮಾಡದೇ ಇರುವುದಕ್ಕೆ ಕಾರಣವಲ್ಲ. ಮಹಾತ್ಮ ಗಾಂಧಿ ನರೇಗಾ ಯೋಜನೆಯಲ್ಲಿ ವಿಧಿಸಿರುವ ನಿರ್ದೇಶನಗಳನ್ನು ಪಾಲಿಸದೇ ಯಾವುದೇ ಕೂಲಿಕಾರರಿಗೆ ಹಣ ಪಾವತಿ ಮಾಡದೇ 1 ರಿಂದ 3ನೇ ಎದರುದಾರರು ಕರ್ತವ್ಯಲೋಪ ಎಸೆಗಿದ್ದಾರೆ. ಆದ್ದರಿಂದ, ಕೆರೆ ಹೂಳು ಎತ್ತುವ ಕಾಮಗಾರಿಯ 116 ಕೂಲಿ ಕಾರ್ಮಿಕರಿಗೆ ರೂ.1,59,500/- ಗಳನ್ನು ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿಯ 73 ಜನ ಕೂಲಿ ಕಾರ್ಮಿಕರಿಗೆ ರೂ.99,125/- ಗಳನ್ನು ನೇರವಾಗಿ ಅವರ ಖಾತೆಗಳಿಗೆ ಪಾವತಿಸಿ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ

12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರಿಗೆ ನಿರ್ದೇಶನ ನೀಡಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

13/6/17.

**(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)**
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.